# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೬೦ Volume 160 | ಬೆಂಗಳೂರು, ಗುರುವಾರ, ೩೧, ಜುಲೈ, ೨೦೨೫( ಶ್ರಾವಣ ,೦೯, ಶಕವರ್ಷ, ೧೯೪೭) BENGALURU, THURSDAY, 31, JULY, 2025 ( SHRAVANA , 09, SHAKAVARSHA, 1947) | ಸಂಚಿಕೆ ೧೪೮ Issue 148 |
|---|---|---|


**ಭಾಗ ೩**

**ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು**

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಜಿಲ್ಲಾ ಆಡಳಿತ ಭವನ, ಕೋಲಾರ-563103

OFFICE OF THE DEPUTY COMMISSIONER, KOLAR DISTRICT, KOLAR-563103

ಸಂಖ್ಯೆ: ಎಂ.ಐ.ಎನ್/ಸಿ.ಆರ್/01/25-26/2740 ದಿನಾಂಕ: 23-07-2025

## : ಅಧಿಸೂಚನೆ :

ವಿಷಯ: ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2011 & ನಿಯಮಗಳು, 2012 ರಂತೆ ಕೋಲಾರ ಜಿಲ್ಲೆಯ ಕಲ್ಲುಪುಡಿ ಘಟಕವನ್ನು ಸುರಕ್ಷಿತ ವಲಯವೆಂದು ಘೋಷಣೆ ಮಾಡುವ ಬಗ್ಗೆ.

ಉಲ್ಲೇಖ: 1) ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ನಿಯಮಾವಳಿ, 2014 ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 19 ಶಾಸನ 2020 ಬೆಂಗಳೂರು, ದಿನಾಂಕ: 31-03-2020

2) ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರ ಸಮಿತಿ ಸಭೆಯ ನಡವಳಿಗಳ ದಿನಾಂಕ: 03-07-2025.

*****

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ನಿಯಮಗಳು, 2020 ನಿಯಮ 3(1) ರಂತೆ ಕಲ್ಲುಪುಡಿ ಘಟಕಗಳನ್ನು ಸ್ಥಾಪಿಸಲು ಸಾರ್ವಜನಿಕರಿಂದ ನಮೂನೆ ಎ ಮತ್ತು ಎ1 ರಲ್ಲಿ ಅರ್ಜಿಗಳನ್ನು ಸ್ವೀಕರಿಸಿದ್ದು, ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ ಅಧಿನಿಯಮದ ಕಲಂ 6(3) ರಂತೆ ಕಂದಾಯ,

ಅರಣ್ಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಅಧಿಕಾರಿಗಳಿಂದ ಜಂಟಿ ಸ್ಥಳ ತಪಾಸಣೆಯನ್ನು ಮಾಡಿ ಅಧಿನಿಯಮ 6(1) ರಂತೆ ಸುರಕ್ಷಿತ ವಲಯಕ್ಕೆ ನಿಗಧಿಪಡಿಸಿರುವ ಷರತ್ತುಗಳನ್ನು ಪಾಲಿಸಿರುವ ಅರ್ಜಿಗಳಿಗೆ ಉಲ್ಲೇಖ-2 ರಂತೆ ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರ ಸಮಿತಿ ಸಭೆಯಲ್ಲಿ ಚರ್ಚಿಸಿ, ಈ ಕೆಳಕಂಡ ಕಲ್ಲುಪುಡಿ ಘಟಕ ಸ್ಥಾಪನೆಗೆ ಸಲ್ಲಿಸಿರುವ ಅರ್ಜಿ ಸುರಕ್ಷಿತ ವಲಯವೆಂದು ಘೋಷಿಸಿ, ಸಭೆಯಲ್ಲಿ ಅನುಮೋದಿಸಿ, ಅಧಿಸೂಚನೆಯನ್ನು ಹೊರಡಿಸಲು ತೀರ್ಮಾನಿಸಲಾಗಿರುತ್ತದೆ.

ಅದರಂತೆ, ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2020 ರನ್ವಯ ಕಲ್ಲು ಪುಡಿ ಮಾಡುವ ಘಟಕವನ್ನು ಸ್ಥಾಪಿಸಲು ಕಲಂ-6 ರಂತೆ ಈ ಕೆಳಕಂಡ ಪ್ರದೇಶಗಳಲ್ಲಿ ಸುರಕ್ಷಿತ ವಲಯವೆಂದು ಈ ಮೂಲಕ ಘೋಷಿಸಲಾಗಿದೆ.

| ಕ್ರ. ಸಂ | ಹೆಸರು | ತಾಲ್ಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ (ಎಕರೆ ಗಳಿಗೆ) | ಜಮೀನಿನ ವಿಧ | ಜಿ.ಪಿ.ಎಸ್ ಕೋ-ಆರ್ಡಿನೇಟ್ಸ್ |
|---|---|---|---|---|---|---|---|
| 1 | ಶ್ರೀ ರಂಗನಾಥ ಇನ್ಫ್ರಾಟೆಕ್ ಎಲ್.ಎಲ್.ಪಿ ಮಹಮದ್ ಮನ್ಸೂರ್ ಪಾಷ ನಂ.843, 7ನೇ ಮುಖ್ಯ ರಸ್ತೆ ಜೆ.ಪಿ.ನಗರ, 3ನೇ ಹಂತ, ಕೆ.ಎಸ್.ಆರ್.ಟಿ.ಸಿ ಲೇಔಟ್ ಬೆಂಗಳೂರು | ಕೋಲಾರ | ನಂದಿ ಕಾಮನ ಹಳ್ಳಿ | 57 & 58 | 0-34 & 1-15 ಒಟ್ಟು 2-09 | ಪಟ್ಟಾ ಜಮೀನು | ID: A, Latitutude: 13°10'21.7743"N, Longitude: 78°02'39.2994"E<br>ID: B, Latitutude: 13°10'19.3994"N, Longitude: 78°02'39.0140"E<br>ID: C, Latitutude: 13°10'16.9685"N, Longitude: 78°02'40.1754"E<br>ID: D, Latitutude: 13°10'17.6727"N, Longitude: 78°02'36.7644"E<br>ID: E, Latitutude: 13°10'19.8545"N, Longitude: 78°02'37.3886"E<br>ID: F, Latitutude: 13°10'21.9846"N, Longitude: 78°02'37.4765"E |
| 2 | ಶ್ರೀ ಪ್ರವೀಣ್ .ಜೆ ಬಿನ್ ಎಂ.ಜಯರಾಮ ನಂ.16, ದೊಟ್ಟಗಟ್ಟೆಗನಬ್ಬೆ ಗ್ರಾಮ ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಶ್ರೀನಿವಾಸಪುರ | ಬಾಣಾಲ ಪಲ್ಲಿ | 8 | 2-00 | ಸರ್ಕಾರಿ ಗೋಮಾಳ | ID: A, Latitutude: 13°25'27.3514"N, Longitude: 78°22'32.8081"E<br>ID: B, Latitutude: 13°25'26.0748"N, Longitude: 78°22'36.4023"E<br>ID: C, Latitutude: 13°25'23.1767"N, Longitude: 78°22'36.4635"E<br>ID: D, Latitutude: 13°25'25.3060"N, Longitude: 78°22'35.4602"E<br>ID: E, Latitutude: 13°25'23.4073"N, Longitude: 78°22'34.5938"E<br>ID: F, Latitutude: 13°25'23.8823"N, Longitude: 78°22'32.9021"E |
| 3 | ಶ್ರೀ ಎನ್.ನಟರಾಜ್ ಬಿನ್ ನಂಜುಂಡೇಗೌಡ ನಂ.784, 4ನೇ ಕ್ರಾಸ್ ಡೂಂಲೈಟ್ ಸರ್ಕಲ್, ಕೋಲಾರ ಟೌನ್ | ಶ್ರೀನಿವಾಸಪುರ | ಬಲ್ತಮರಿ | 141 | 2-00 | ಖರಾಬ್ ಗೋಮಾಳ | ID: A, Latitutude: 13°34'17.8364"N, Longitude: 78°19'29.3082"E<br>ID: B, Latitutude: 13°34'17.8247"N, Longitude: 78°19'34.6115"E<br>ID: C, Latitutude: 13°34'16.1715"N, Longitude: 78°19'34.5585"E<br>ID: D, Latitutude: 13°34'16.1758"N, Longitude: 78°19'29.2991"E |

| | | | | | | | | | |
|---|---|---|---|---|---|---|---|---|---|
| 4 | **ಶ್ರೀ ಸೊಣ್ಣೆಗೌಡ ಬಿನ್ ಈರಪ್ಪ ಮಣ್ಣೆಘಟ್ಟ ಗ್ರಾಮ, ಕೋಲಾರ ತಾಲ್ಲೂಕು, ಮತ್ತು ಜಿಲ್ಲೆ** | **ಮುಳಬಾಗಿಲು** | **ಜೋಳನ ಗುಂಟೆ** | 119 | 2-00 | **ಸರ್ಕಾರಿ ಗೋಮಾಳ** | ID | Latitutude | Longitude |
| | | | | | | | A | 13°08'06.3314"N | 78°19'44.5139"E |
| | | | | | | | B | 13°08'04.9756"N | 78°19'47.1662"E |
| | | | | | | | C | 13°08'02.5974"N | 78°19'46.2956"E |
| | | | | | | | D | 13°08'03.8975"N | 78°19'43.0019"E |

ಈ ಅಧಿಸೂಚನೆಯು ಅಸ್ತಿತ್ವದಲ್ಲಿರುವ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಇಲಾಖೆಗಳ ಕಾಯ್ದೆಗೆ ನಿಯಮಗಳಿಗೆ ಒಳಪಟ್ಟಿರುತ್ತದೆ ಮತ್ತು ಕಂದಾಯ ದಾಖಲೆಗಳಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಯಾವುದೇ ರೀತಿಯ ಮುನ್ಸೂಚನೆಯನ್ನು ನೀಡದೇ ಅಧಿಸೂಚನೆಯನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸಿರುವ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ**.

1. 100 Meters Buffer Zone shall be maintained from the boundary of cultivated/settlement land or any other existing structures (located adjacent to the proposed safer zone.
2. Action shall be initiated to construct an appropriate boundary around the safer zone and there shall be planting of tall growing foliage bearing perennial trees all along the boundaries. At least five such rows of tall growing leafy trees shall form a curtain to the surrounding area so that there is no escape of dust particles to its surrounding limits.
3. Each Stone Crusher shall be allocated with a minimum area of 1 Acre of land in the Safer Zone as per the requirement of the Karnataka Regulation of Stone Crusher Act 2011.
4. This notification is subject to submission of Form-01 to 05 and Form 06 to 10 and 11E sketch by the applicant as per Regional Commissioner Bengaluru circular No LND/CR/RT/2019-20 Dated 06.12.2019. The applicant shall submit consent letter from the land grantee if the land is granted from revenue department under act and rules.
5. Link roads and internal roads within the Safer Zone shall be properly metaled within one year, so the fugitive emissions are reduced. The ambient air quality in the Safer Zone shall confirm to the National Ambient Air Quality Standards as specified in Environment (Protection) Seventh Amendment Rules. 2009.
6. The entire area shall have a planned rain water harvesting system over a period of 03 years so that the location is self-reliant as far as water requirement is concerned.

7. This Notification is subject to any judgment/s of the Hon'ble Supreme Court or Hon'ble High Court of or any other Courts that may be pronounced from time to time in the said matter of Safer Zone.
8. The applicant shall shift the Crushers to the Safer Zone within the time prescribed under the Karnataka Regulation of Stone Crushers Act. 2011.
9. There shall not be any complaint with respect to water and air pollution against the crusher established in the Safer Zone.

This Notification is subjected to the above said conditions as per the Karnataka Regulation of Stone Crushers Act, 2011 and Rules, 2012 & 2020.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಕಲ್ಲುಪುಡಿ ಘಟಕಗಳ ಲೈಸೆನ್ಸಿಂಗ್ ಮತ್ತು
ನಿಯಂತ್ರಣ ಪ್ರಾಧಿಕಾರ, ಕೋಲಾರ ಜಿಲ್ಲೆ

**PR-952**

**IN THE COURT OF THE 32 ADDL. CJM.COURT- BANGALORE**

**It is hereby notified to the public that the Mahalakshim Layout police Station, Bangalore City have seized the following vehicles as unclaimed and vehicles are lying in the police station as unclaimed so far. Hence owners of the properties, (vehicles) may put their claims one month from the date of this publication.**

**By order of the Court**

Mahalaksime Layout PS Crl.Misc No. 5103/2025

List of the seized vehicles are lying in the **Mahalakshim Layout**Police Station, Bangalore City which have been seized under CRIME No. and PF NO as follows.

| Sl no | Cr no & u/s | PF No | Type of vehical& vehical Number | Chassis No | ENG no |
|---|---|---|---|---|---|
| 1 | Cr, No, 62/2016 u/s 341, 323, 504,506 IPC | PF no 11/2016 | ACTIVA KA04EG0045 | ME4JF085H38267279 | JF08E0275064 |
| 2 | Cr, No, 83/2020 U/S 379 IPC | PF no 43/2020 | BAJAJ PULSUR KA08K6400 | MD2DHDHZZECF7366 6 | DHGBRE74654 |
| 3 | Cr, No, 47/2020 U/S 379 IPC | PF no 78/2020 | HONDA ACTIVE KA02HE4917 | ME4JF083B98677282 | JF08E5708822 |
| 4 | Cr, No, 47/2020 U/S 379 IPC | PF no 79/2020 | SUZUKI MX KA17L5910 | 1008F678533 | 1006M730149 |
| 5 | Cr, No, 47/2020 U/S 379 IPC | PF no 79/2020 | YAMAHA KA15E5910 | 96G1L5021008 | 1L5021008 |
| 6 | Cr, No, 47/2020 U/S 379 IPC | PF no 79/2020 | HONDA ACTIVA KA51AB1466 | ME4JF50CAJT089053 | JF50ET9087605 |
| 7 | Cr, No, 47/2020 U/S 379 IPC | PF no 79/2020 | ACCES-125 KA02HE6717 | MB8CF4CAB98201994 | F486201953 |
| 8 | Cr, No, 47/2020 U/S 379 IPC | PF no 79/2020 | DISCOVER-125 KA03HN1343 | MD2DSJZZZVWA09513 | JZMBVA59250 |

| | | | | | |
|---|---|---|---|---|---|
| 9 | Cr, No, 47/2020 U/S 379 IPC | PF no 80/2020 | RTR-APACHE KA06X8289 | MD634KE62G2H68552 | 0E6HG2134887 |
| 10 | Cr, No, 47/2020 U/S 379 IPC | PF no 80/2020 | Honda active KA04EM3906 | ME4JF117H58005354 | JF11E6005137 |
| 11 | 41/2022 U/S 379 IPC | PF No 29/2022 | JUPITOR KA 04 HX 7357 | MD626BG40F1B62768 | BG4BF1452729 |
| 12 | CR NO 22/2023 U/S 379 IPC | PF NO 40/2023 | HONDA ACTIVA KA01HL2820 | ME4JF491FF8187181 | JF49E80218845 |
| 13 | CR NO 22/2023 U/S 379 IPC | PF NO 40/2023 | JUPITER KA02HY9229 | MD626BG42E1D33602 | BG4DE1129839 |
| 14 | CR NO 213/2023 U/S 379 IPC | PF NO 144/2023 | HONDA ACTIVA KA05JN5165 | ME4JF504GFT538151 | JF50ET2538980 |
| 15 | CR NO 213/2023 U/S 379 IPC | PF NO 144/2023 | HONDA DIO KA03JP8979 | ME4JF39DMH7094378 | JF39ET4028733 |

Bangalore City. Sd/-

Date:24/07/2025 **32 ADDL. CJM.COURT**,

Crl.Misc. : 5103/2025 BANGALORE CITY

**PR-953**

**ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು**

**ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್,**
**ಪೊಲೀಸ್ ಆಯುಕ್ತರು,**
**ಬೆಂಗಳೂರು ನಗರ.**

ವಿಷಯ: ಬಾಗಲೂರು ಕ್ರಾಸ್ ನಿಂದ ರೇವಾ ಕಾಲೇಜ್ ಜಂಕ್ಷನ್ ವರೆಗೆ 2. ಕಿ.ಮೀಟರ್ ರಸ್ತೆಯ ಎರಡು ಬದಿಯಲ್ಲಿ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಪೀಕ್ ಹವರ್ಸ್ ನಲ್ಲಿ ಮಾತ್ರ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1 ಪೊಲೀಸ್ ಇನ್ಸ್‌ಪೆಕ್ಟರ್ ಯಲಹಂಕ ಸಂಚಾರ ಪೊಲೀಸ್ ಠಾಣೆ ರವರ ಪತ್ರ ಸಂ.127/ಸಿಸಿ/ಯ.ಸಂ.ಪಿ.ಎಸ್/ 2025 ದಿ. 17.06.2025.

2 ಎಸಿಪಿ, ಸಂಚಾರ ಈಶಾನ್ಯ ಉಪ-ವಿಭಾಗ,ಬೆಂಗಳೂರು ನಗರ ರವರ ಪತ್ರ ಸಂ. ಅಧಿ/ಪ್ರ/05/ಸಂ.ಈ.ಉ.ವಿ/2025 ದಿ.18.06.2025.

3 ಉಪಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ ರವರ ಪತ್ರ ಸಂ.06/ಅ.ಸೂ/ಡಿಸಿಪಿ/ಸಂ.ಉ/2025. ದಿ:01.07.2025.

4 ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ ದಿ:11.07.2025.

**ಪ್ರಸ್ತಾವನೆ,**

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ಯಲಹಂಕ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಈಶಾನ್ಯ ಉಪವಿಭಾಗ, ಉಪ ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಬೆಂಗಳೂರು ನಗರ, ಸಂಚಾರ ಉತ್ತರ ವಿಭಾಗದ, ಯಲಹಂಕ ಸಂಚಾರ ಪೊಲೀಸ್ ಠಾಣಾ ಸರಹದ್ದಿನ, ಬೆಂಗಳೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-44 ಕ್ಕೆ ಹೊಂದಿಕೊಂಡಂತೆ ಬಾಗಲೂರು ಮುಖ್ಯರಸ್ತೆ ಇದ್ದು, ಈ ರಸ್ತೆಯು ಪ್ರಮುಖವಾಗಿ ಕೆಐಎಡಿಬಿ ಇಂಡಸ್ಟ್ರೀಯಲ್ ಪ್ರದೇಶ, ಬಾಗಲೂರು ಗ್ರಾಮ, ಸಾತನೂರು ಮುಂತಾದ ಪ್ರದೇಶಗಳಿಗೆ ಹಾಗೂ ಪ್ರಮುಖ ಶಾಲಾ/ಕಾಲೇಜುಗಳಾದ ರೇವಾ ಯುನಿವರ್ಸಿಟಿ, ಡೆಲ್ಲಿ ಪಬ್ಲಿಕ್ ಶಾಲೆಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿರುತ್ತದೆ. ಸದರಿ ರಸ್ತೆಯ ಸುತ್ತಮುತ್ತ ಬಿಎಸ್ಎಫ್, ಐಎಎಫ್ ನಂತಹ ಪ್ರಮುಖ ಸಂಸ್ಥೆಗಳಿರುವ ಪ್ರಮುಖ ವಾಣಿಜ್ಯ ಪ್ರದೇಶವಾಗಿರುವುದರಿಂದ ಪ್ರತಿನಿತ್ಯ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತಿರುತ್ತವೆ. ಈ ರಸ್ತೆಯು ದ್ವಿಮುಖ ಸಂಚಾರದ ರಸ್ತೆಯಾಗಿದ್ದು, ಸಾರ್ವಜನಿಕರು ತಮ್ಮ ವಾಹನಗಳನ್ನು ಮುಖ್ಯರಸ್ತೆಯಲ್ಲಿ ಎಲ್ಲೆಂದರಲ್ಲಿ ರಸ್ತೆಯ ಎರಡು ಬದಿಯಲ್ಲಿ ನಿಲುಗಡೆ ಮಾಡುತ್ತಿರುವುದರಿಂದ, ಬಾಗಲೂರು ಕ್ರಾಸ್ ಕಡೆಯಿಂದ ರೇವಾ ಕಾಲೇಜ್ ಜಂಕ್ಷನ್ ಕಡೆಗೆ ಮತ್ತು ರೇವಾ ಕಾಲೇಜ್ ಕಡೆಯಿಂದ ಬಾಗಲೂರು ಕ್ರಾಸ್ ಕಡೆಗೆ ತೀವ್ರ ಸಂಚಾರ ದಟ್ಟಣೆ ಉಂಟಾಗುತ್ತಿರುತ್ತದೆ. ಇದರಿಂದಾಗಿ ಇತರೇ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುತ್ತವೆ. ಹಾಗೂ ಸಂಚಾರ ದಟ್ಟಣೆಯನ್ನು ಪರಿಶೀಲಿಸಿದ ಮಾನ್ಯ ಕೃಷಿ ಸಚಿವರಾದ ಶ್ರೀ ಕೃಷ್ಣಬೈರೇಗೌಡರವರು ಪೀಕ್ ಹವರ್ಸ್ ನಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಿ ಅಧಿಸೂಚನೆಯನ್ನು ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಈ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ಯಲಹಂಕ ಸಂಚಾರ ಠಾಣೆ ರವರು ಸುಗಮ ಸಂಚಾರದ ಹಿತದೃಷ್ಟಿಯಿಂದ, ಯಲಹಂಕ ಸಂಚಾರ ಪೊಲೀಸ್ ಠಾಣಾ ಸರಹದ್ದಿನ, ಬಾಗಲೂರು ಕ್ರಾಸ್ ನಿಂದ ರೇವಾ ಕಾಲೇಜ್ ಜಂಕ್ಷನ್ ವರೆಗೆ 2.0 ಕಿ.ಮೀಟರ್ ರಸ್ತೆಯ ಎರಡು ಬದಿಯಲ್ಲಿ ಪ್ರತಿದಿನ ಬೆಳಗ್ಗೆ 07.30 ಗಂಟೆಯಿಂದ ಬೆಳಗ್ಗೆ 10.30 ಗಂಟೆಯವರೆಗೆ ಮತ್ತು ಸಂಜೆ 04.30 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ (ಪೀಕ್ ಹವರ್ಸ್‌ನಲ್ಲಿ ಮಾತ್ರ)ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸುವ ಅವಶ್ಯಕತೆ ಇರುವುದಾಗಿ ತಿಳಿಸುತ್ತಾ, ಅಧಿಸೂಚನೆಯನ್ನು ಹೊರಡಿಸಲು ಕೋರಿ, ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ ಯಲಹಂಕ ಸಂಚಾರ ಪೊಲೀಸ್ ಠಾಣಾ ಸರಹದ್ದಿನ, ಬಾಗಲೂರು ಕ್ರಾಸ್ ನಿಂದ ರೇವಾ ಕಾಲೇಜ್ ಜಂಕ್ಷನ್ ವರೆಗೆ 2.0 ಕಿ.ಮೀಟರ್ ರಸ್ತೆಯ ಎರಡು ಬದಿಯಲ್ಲಿ ಪ್ರತಿದಿನ ಬೆಳಗ್ಗೆ 07.30 ಗಂಟೆಯಿಂದ ಬೆಳಗ್ಗೆ 10.30 ಗಂಟೆಯವರೆಗೆ ಮತ್ತು ಸಂಜೆ 04.30 ಗಂಟೆಯಿಂದ ರಾತ್ರಿ

8.30 ಗಂಟೆಯವರೆಗೆ (ಪೀಕ್ ಹವರ್ಸ್‌ನಲ್ಲಿ ಮಾತ್ರ) ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಿ, ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

**ಆದೇಶ ಸಂಖ್ಯೆ:29/ಅಧಿಸೂಚನೆ/ಜಂ.ಪೊ.ಆ (ಸಂ)/2025,ದಿ:14.07.2025**

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ** ಆದನಾನು**,** ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ಯಲಹಂಕ ಸಂಚಾರ ಪೊಲೀಸ್ ಠಾಣಾ ಸರಹದ್ದಿನ, ಬಾಗಲೂರು ಕ್ರಾಸ್ ನಿಂದ ರೇವಾ ಕಾಲೇಜ್ ಜಂಕ್ಷನ್ ವರೆಗೆ 2.0 ಕಿ.ಮೀಟರ್ ರಸ್ತೆಯ ಎರಡು ಬದಿಯಲ್ಲಿ ಪ್ರತಿದಿನ ಬೆಳಗ್ಗೆ 07.30 ಗಂಟೆಯಿಂದ ಬೆಳಗ್ಗೆ 10.30 ಗಂಟೆಯವರೆಗೆ ಮತ್ತು ಸಂಜೆ 04.30 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ (ಪೀಕ್ ಹವರ್ಸ್‌ನಲ್ಲಿ ಮಾತ್ರ) ಎಲ್ಲಾ ಮಾದರಿಯ ವಾಹನಗಳ ನಿಲುಗಡೆ (ನೋ-ಪಾರ್ಕಿಂಗ್) ನಿಷೇಧಿಸಿ, ಈ ಕೆಳಕಂಡಂತೆ, ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

**ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಿರುವ ರಸ್ತೆಯ ವಿವರ.**

| ರಸ್ತೆಯ ಹೆಸರು | ಇಂದ | ವರೆಗೆ | ದಿಕ್ಕು |
|---|---|---|---|
| ಬಾಗಲೂರು ಮುಖ್ಯರಸ್ತೆ | ಬಾಗಲೂರು ಕ್ರಾಸ್ ಜಂಕ್ಷನ್ ನಿಂದ | ರೇವಾ ಕಾಲೇಜ್ ಜಂಕ್ಷನ್ ವರೆಗೆ | ರಸ್ತೆಯ ಎರಡು ಬದಿಗಳಲ್ಲಿ (2ಕಿ.ಮೀ) |
| ಪ್ರತಿದಿನ ಬೆಳಗ್ಗೆ 07.30 ಗಂಟೆಯಿಂದ ಬೆಳಗ್ಗೆ 10.30 ಗಂಟೆಯವರೆಗೆ ಮತ್ತು ಸಂಜೆ 04.30 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ (ಪೀಕ್ ಹವರ್ಸ್‌ನಲ್ಲಿ ಮಾತ್ರ) | | | |

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:14.07.2025 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ,

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

**(ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್)**
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

**PR-954**

**ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು**

**ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್.**
**ಪೊಲೀಸ್ ಆಯುಕ್ತರು,**
**ಬೆಂಗಳೂರು ನಗರ.**

ವಿಷಯ: ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಜಿಕೆವಿಕೆ ಕೃಷಿ ವಿಶ್ವ ವಿದ್ಯಾಲಯದ ಬಲಭಾಗದ ಡಬಲ್ ರಸ್ತೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್ ಸರ್ವೀಸ್ ರಸ್ತೆಯ ಅಂತ್ಯದ ವರೆಗೆ ಹಾಲಿ ಇರುವ ದ್ವಿಮುಖ ಸಂಚಾರವನ್ನು **ಮಾರ್ಪಡಿಸಿ,** ಉತ್ತರದಿಂದ ದಕ್ಷಿಣದ ಕಡೆಗೆ 600 ಮೀಟರ್ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ **ಅಧಿಸೂಚನೆ** ಹೊರಡಿಸಿರುವ ಬಗ್ಗೆ.

ಉಲ್ಲೇಖ:
1 ಪೊಲೀಸ್ ಇನ್ಸ್‌ಪೆಕ್ಟರ್ ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ ರವರ ಪತ್ರ ಸಂ.ಸಿಸಿ/90/ಹೆ.ಸಂ.ಪಿ.ಎಸ್/2025, ದಿ. 20.06.2025.
2 ಎಸಿಪಿ, ಸಂಚಾರ ಈಶಾನ್ಯ ಉಪ-ವಿಭಾಗ,ಬೆಂಗಳೂರು ನಗರ ರವರ ಪತ್ರ ಸಂ.ಅಧಿ/ಪ್ರ/06/ಎಸಿಪಿ/ಸಂ.ಈ.ಉ.ವಿ/2025.ದಿ.23.06.2025.
3 ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಸಂ**:**ಅಧಿಸೂಚನೆ /6(ಎ)/ಜಂಟಿ.ಸಿಪಿ/ಸಂ.ವಿ/2024.ದಿ:03.04.2024.
4 ಉಪಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ ರವರ ಕಛೇರಿ.ಸಂ/05/ನೋಟಿಫಿಕೇಷನ್/ಡಿಸಿಪಿ/ಸಂಉ/2025,ದಿ:26.06.2025.
5 ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ ದಿ: 15.07.2025.

**ಪ್ರಸ್ತಾವನೆ,**

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಈಶಾನ್ಯ ಉಪವಿಭಾಗ, ಉಪ ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಬೆಂಗಳೂರು ನಗರ ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ **ಬೆಂಗಳೂರು ಬಳ್ಳಾರಿ ರಸ್ತೆಯ ಸರ್ವೀಸ್ ರಸ್ತೆಯಲ್ಲಿ** ಜಿ.ಕೆ.ವಿ.ಕೆ ಕೃಷಿ ವಿದ್ಯಾಲಯದ, ಬಲಭಾಗದ ಜಿ.ಕೆ.ವಿ.ಕೆ ಡಬಲ್ ರಸ್ತೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್ ಸರ್ವೀಸ್ ರಸ್ತೆಯವರೆಗೆ ಉತ್ತರದಿಂದ ದಕ್ಷಿಣಕ್ಕೆ 600 ಮೀಟರ್ ಉದ್ದವಿದ್ದು, ಏರ್‌ಪೋರ್ಟ್‌ಗೆ ಸಂಚರಿಸುವ ಮುಖ್ಯರಸ್ತೆಗೆ ಹೊಂದಿಕೊಂಡಿದ್ದು ಬ್ಯಾಟರಾಯನಪುರ ಜಂಕ್ಷನ್‌ನಿಂದ ಯಲಹಂಕ ಹಾಗೂ ದೇವನಹಳ್ಳಿಯ ಕಡೆ ಸಂಚರಿಸುವ ರಸ್ತೆಯಾಗಿದ್ದು, ಸದಾ ಸಂಚಾರ ದಟ್ಟಣೆಯಿಂದ ಕೂಡಿದ್ದು ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿರುವುದಲ್ಲದೇ ಸಣ್ಣ ಪುಟ್ಟ ಅಪಘಾತಗಳು ಸಂಭವಿಸುತ್ತಿರುವುದಾಗಿ ಈ ಬಗ್ಗೆ ಸ್ಥಳೀಯ ಸಾರ್ವಜನಿಕರು ಹಾಗೂ ವಾಹನ ಸವಾರರು ಅನೇಕ ಬಾರಿ ಸಾಮಾಜಿಕ ಜಾಲತಾಣದ ಮೂಲಕ ಸದರಿ ರಸ್ತೆಯಲ್ಲಿ ಜಿ.ಕೆ.ವಿ.ಕೆ ಡಬಲ್ ರಸ್ತೆಯ ಕಡೆಯಿಂದ ಬ್ಯಾಟರಾಯನಪುರ ಜಂಕ್ಷನ್ ಕಡೆಗೆ ಸರ್ವೀಸ್ ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ನಿರ್ಬಂಧಿಸುವಂತೆ ಕೋರಿರುತ್ತಾರೆ.

ಸಾರ್ವಜನಿಕರ ಮನವಿಯ ಮೇರೆಗೆ ಜಿ.ಕೆ.ವಿ.ಕೆ ಕೃಷಿ ವಿದ್ಯಾಲಯದ ಬಲಭಾಗದ ಜಿಕೆವಿಕೆ ಡಬಲ್ ರಸ್ತೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್‌ನಿಂದ ಸಹಕಾರ ನಗರಕ್ಕೆ ತೆರಳುವ ಸರ್ವೀಸ್ ರಸ್ತೆಯಲ್ಲಿ, ಜಿಕೆವಿಕೆ ಡಬಲ್ ರಸ್ತೆಯಿಂದ ಬ್ಯಾಟರಾಯನಪುರ ಜಂಕ್ಷನ್ ವರೆಗೆ ಉತ್ತರದಿಂದ ದಕ್ಷಿಣದ ಕಡೆಗೆ ದ್ವಿಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿ, ಈ ಕಛೇರಿ ಅಧಿಸೂಚನೆ ಸಂ.6(ಎ)ಜ.ಪೋ.ಆ(ಸಂ)/2024 ದಿನಾಂಕ 03.04.2024 ಅನ್ನು ಹೊರಡಿಸಲಾಗಿರುತ್ತದೆ, ಸದರಿ ರಸ್ತೆಯು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಹೊಂದಿಕೊಂಡಿರುವುದರಿಂದ ವಾಹನಗಳ ಸಂಚಾರ ಹೆಚ್ಚಾಗಿರುವುದಲ್ಲದೇ, ಜಕ್ಕೂರು ಕಡೆಯಿಂದ ಬೆಂಗಳೂರು ನಗರದ ಕಡೆಗೆ, ಬೆಂಗಳೂರು ನಗರದ ಕಡೆಯಿಂದ ಯಲಹಂಕ ಮತ್ತು ದೇವನಹಳ್ಳಿ ಕಡೆಗೆ ಹಾಗೂ ಅಮೃತಹಳ್ಳಿ ಕಡೆಯಿಂದ ಯಲಹಂಕ ಹಾಗೂ ಇತರೆ ಕಡೆಗೆ ಸಂಚರಿಸುವ ವಾಹನ ಗಳಿಂದ ಸಂಚಾರ ದಟ್ಟಣೆಯುಂಟಾಗುತ್ತಿರುತ್ತದೆ. ಈ ಸಂಚಾರ ದಟ್ಟಣೆಯಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗುವುದಷ್ಟೆ ಅಲ್ಲದೇ ಸಂಭವಿಸಬಹುದಾದ ಅಪಘಾತಗಳನ್ನು ತಪ್ಪಿಸುವ ಸಲುವಾಗಿ, ಈ ರಸ್ತೆಯಲ್ಲಿ ಜಿಕೆವಿಕೆ ಕಡೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್ ಕಡೆಗೆ ಸಂಚರಿಸುವ ಎಲ್ಲಾ ಮಾದರಿಯ ವಾಹನಗಳನ್ನು ನಿರ್ಬಂಧಿಸುವುದು ಅವಶ್ಯಕವಾಗಿರುತ್ತದೆ, ಎಂದು ತಿಳಿಸುತ್ತಾ, ಹಾಲಿ ಇರುವ ದ್ವಿಮುಖ ಸಂಚಾರವನ್ನು ಮಾರ್ಪಡಿಸಿ, ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದ ಬಲಭಾಗದ ಡಬಲ್ ರಸ್ತೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್ ನ ಸರ್ವೀಸ್ ರಸ್ತೆ ಅಂತ್ಯದ ವರೆಗೆ, ಉತ್ತರದಿಂದ ದಕ್ಷಿಣಕ್ಕೆ 600 ಮೀಟರ್ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, **ಅಧಿಸೂಚನೆಯನ್ನು ಹೊರಡಿಸಲು ಕೋರಿ, ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ .**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ, **ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ ಸರಹದ್ದಿನ ಬೆಂಗಳೂರು ಬಳ್ಳಾರಿ ರಸ್ತೆಯ (ಬ್ಯಾಟರಾಯನಪುರ ಜಂಕ್ಷನ್ ನಿಂದ ಜಿಕೆವಿಕೆ ಕಡೆಗೆ) ಸರ್ವೀಸ್ ರಸ್ತೆಯಲ್ಲಿ** ಹಾಲಿ ಅಧಿಸೂಚನೆ ಆದೇಶ ಸಂ.6(ಎ)ಜ.ಪೋ.ಆ(ಸಂ)/2024 ದಿನಾಂಕ 03.04.2024 ರಲ್ಲಿ ಜಿ.ಕೆ.ವಿ.ಕೆ ಡಬಲ್ ರಸ್ತೆಯಿಂದ ಬ್ಯಾಟರಾಯನಪುರ ಜಂಕ್ಷನ್ ವರೆಗೆ ಉತ್ತರದಿಂದ–ದಕ್ಷಿಣಕ್ಕೆ ಇರುವ ದ್ವಿಮುಖ ಸಂಚಾರವನ್ನು ಮಾರ್ಪಡಿಸಿ, ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದ ಬಲಭಾಗದ ಡಬಲ್ ರಸ್ತೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್ ಸರ್ವೀಸ್ ರಸ್ತೆಅಂತ್ಯದ ವರೆಗೆ,

ಉತ್ತರದಿಂದ ದಕ್ಷಿಣದ ಕಡೆಗೆ 600 ಮೀಟರ್ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

**ಆದೇಶ ಸಂಖ್ಯೆ:30/ಅಧಿಸೂಚನೆ/ಜಂ.ಪೊ.ಆ(ಸಂ)/2025,ದಿ:15.07.2025**

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು,** ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ ಸರಹದ್ದಿನ ಬೆಂಗಳೂರು ಬಳ್ಳಾರಿ ರಸ್ತೆಯ (ಬ್ಯಾಟರಾಯನಪುರ ಜಂಕ್ಷನ್ ನಿಂದ ಜಿಕೆವಿಕೆ ಕಡೆಗೆ) ಸರ್ವೀಸ್ ರಸ್ತೆಯಲ್ಲಿ, ಸುಗಮ ಸಂಚಾರದ ಹಿತದೃಷ್ಟಿಯಿಂದ, ಹಾಲಿ ಅಧಿಸೂಚನೆ ಆದೇಶ ಸಂ.6(ಎ)ಜ.ಪೋ.ಆ(ಸಂ)/2024 ದಿನಾಂಕ 03.04.2024 ರಲ್ಲಿ ಜಿ.ಕೆ.ವಿ.ಕೆ ಡಬಲ್ ರಸ್ತೆಯಿಂದ ಬ್ಯಾಟರಾಯನಪುರ ಜಂಕ್ಷನ್ ವರೆಗೆ ಉತ್ತರದಿಂದ–ದಕ್ಷಿಣದ ಕಡೆಗೆ ಇರುವ ದ್ವಿಮುಖ ಸಂಚಾರವನ್ನು ಮಾರ್ಪಡಿಸಿ, ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದ ಬಲಭಾಗದ ಡಬಲ್ ರಸ್ತೆಯಿಂದ ಮಾಲ್ ಆಫ್ ಏಷಿಯಾ ಮಾರ್ಗವಾಗಿ ಬ್ಯಾಟರಾಯನಪುರ ಜಂಕ್ಷನ್ ಸರ್ವೀಸ್ ರಸ್ತೆ ಅಂತ್ಯದ ವರೆಗೆ, ಉತ್ತರದಿಂದ ದಕ್ಷಿಣಕ್ಕೆ 600 ಮೀಟರ್ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

**ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿರ್ಬಂಧಿಸಿ ಅಧಿಸೂಚನೆ ಹೊರಡಿಸಿರುವ ರಸ್ತೆಯ ವಿವರ.**

| **ಸಂಚಾರ ಠಾಣೆ : ಹೆಬ್ಬಾಳ** | | | |
|---|---|---|---|
| **ರಸ್ತೆಯ ಹೆಸರು** | **ಇಂದ** | **ವರೆಗೆ** | **ದಿಕ್ಕು** |
| ಬೆಂಗಳೂರು ಬಳ್ಳಾರಿ ರಸ್ತೆಯ ಸರ್ವೀಸ್ ರಸ್ತೆ (ಬ್ಯಾಟರಾಯನಪುರ ಜಂಕ್ಷನ್ ನಿಂದ ಜಿಕೆವಿಕೆ ಕಡೆಗೆ) | ಜಿ.ಕೆ.ವಿ.ಕೆ ಕೃಷಿ ವಿಶ್ವವಿದ್ಯಾಲಯದ ಬಲಭಾಗದ ಡಬಲ್ ರಸ್ತೆಯಿಂದ | ಬ್ಯಾಟರಾಯನಪುರ ಜಂಕ್ಷನ್ ಸರ್ವೀಸ್ ರಸ್ತೆ ಅಂತ್ಯದ ವರೆಗೆ | ಉತ್ತರದಿಂದ ದಕ್ಷಿಣದ ಕಡೆಗೆ (600ಮೀಟರ್‌ಗಳು). |
| **ಅಕ್ಷಾಂಶ-**13.07257 13.067367. | | **ರೇಖಾಂಶ-**77.592533. 77.592920 | |

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:15.07.2025 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

**(ಸೀಮಾಂತ್ ಕುಮಾರ್ ಸಿಂಗ್ ಐ.ಪಿ.ಎಸ್)**
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

**PR-955**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH